† ಶ್ರೀ ಎಸ್. ಆರ್. ಬೊಮ್ಮಾಯಿ. ಮಾನ್ಯ ಅಧ್ಯಕ್ಷರೇ, ಈ ಮನೆಯ ಮಾನ್ಯ ಸದಸ್ಯರಾದ ಪರು ತಮ್ಮ ತಮ್ಮ ಗ್ರಾಮಗಳಿಂದ ಇಲ್ಲಿಗೆ ಬಂದಾಗ ಅವರಿಗೆ ವಸತಿ ಸೌಕರ್ಯವನ್ನು ಮಾಡಿಕೊಡ ತಕ್ಕದ್ದು ಲೆಜಿಸ್ಲೇಚರ್ ಸೆಕ್ರೆಟರಿಯವರ ಕರ್ತವ್ಯ. ಆದರೆ ಈ ಮಾನ್ಯ ಸದಸ್ಯರು ಇಲ್ಲಿಗೆ ಬಂದಾಗ ಅವರ ವಾಸಕ್ಕೆ ಅವಕಾಶವಿಲ್ಲದೆ ಅವರು ಹೊರಗಡೆ ಉಳಿಯುವ ಪ್ರಸಂಗ ಬಂದರೆ ಅದನ್ನು ಯಾರೂ ಸಹಿಸುವುದಕ್ಕಾಗುವುದಿಲ್ಲ. ಸದಸ್ಯರು ಇಲ್ಲಿಗೆ ಬಂದಾಗ ಅವರ ವಾಸ್ತವಕ್ಕೆ ಯೋಗ್ಯವಾದ ಸೌಕರ್ಯವನ್ನು ಮಾಡಿಕೊಡಬೇಕು ಮತ್ತು ಅವರನ್ನು ಮರ್ಯಾದೆಯಿಂದ ಕಾಣಬೇಕು. ಅವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ನಾನು ಹೇಳುವುದಿಲ್ಲ. ಆದರೆ ಅವರಿಗೆ ಸಲ್ಲತಕ್ಕ ಗೌರವ ಸಲ್ಲಬೇಕು. ಒಬ್ಬರಿಗೆ ಒಂದು ರೂಮನ್ನು ಅಲಾಟ್ ಮಾಡಿದ ಮೇಲೆ ಅದರಲ್ಲಿ ಮತ್ತೊಬ್ಬ ಸದಸ್ಯರು ಹೋಗಿ ಅಕ್ರಮ ಮಾಡಿದರೆ ಅದು ಸರಿಯಲ್ಲ. ಇಂತಹ ವಿಚಾರದಲ್ಲಿ ಒಬ್ಬರಿಗೊಬ್ಬರು ಸಹಕಾರ ಮಾಡಬೇಕಾಗುತ್ತದೆ. ಯಾರಿಗೆ ಯಾವ ರೂಮ್ ಅಲಾಟ್ ಆಗಿರುತ್ತದೋ ಆ ರೂಮಿಗೆ ಹೋಗಬೇಕಾಗುತ್ತದೆ. ಈ ವಿಚಾರದಲ್ಲಿ ಒಬ್ಬರಿಗೊಬ್ಬರು ಸಹಕರಿಸದಿದ್ದರೆ ಲೆಜಿಸ್ಲೇಚರ್ ಸೆಕ್ರೆಟರಿಯವರು ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡು ಸೂಕ್ತವಾದ ರೀತಿಯಲ್ಲಿ ಅದನ್ನು ಪರಿಹಾರ ಮಾಡಿಕೊಡಬೇಕು. ಮತ್ತು ಇಂತಹ ಸಂದರ್ಭಗಳು ಬಂದಾಗ ಸಂಬಂಧಪಟ್ಟ ಸದಸ್ಯರುಗಳ ಮನವೊಲಿಸಲು ಅವರು ಪ್ರಯತ್ನ ಮಾಡಬೇಕು. ಆದರೆ ಈ ಪ್ರಕರಣದಲ್ಲಿ ಅಂತಹ ಒಂದು ಪ್ರಸಂಗವಾಗಿಲ್ಲ. ಮಾನ್ಯ ವಿರೋಧ ಪಕ್ಷದವರಿಗೆ ತೊಂದರೆಯಾಗಿದೆ. ಒಂದು ರೀತಿಯಲ್ಲಿ ಅವರನ್ನು ಆಗೌರವದಿಂದ ನೋಡಿದ್ದಾರೆಂಬಂದು ಅವರ ಮಾತಿನಿಂದ ತಿಳಿಯುತ್ತದೆ. ಸೆಕ್ರೆಟರಿಯವರ ಗಮನಕ್ಕೆ ಈ ವಿಚಾರವನ್ನು ಅವರು ತಂದಾಗ ಸೆಕ್ರೆಟರಿಯವರು ನೀವೇ ಏನಾದರು ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಮತ್ತು ಇವರಿಗೆ ಅಲಾಟ್ ಆದ ರೂಮಿಗೆ ಹೋಗಿ ಸೇರಿಕೊಂಡಿರುವ ಸದಸ್ಯರು ಸ್ಪೀಕರ್ ಅವರು ಹೇಳಿದರೂ ಸಹ ನಾನು ರೂಮು ಬಿಟ್ಟು ಹೋಗುವುದಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ. ಅದಕ್ಕಾಗಿ ನಾನು ಹೇಳುವುದೇನೆಂದರೆ, ಈ ಬಗ್ಗೆ ಮಾನ್ಯ ಸದಸ್ಯರಿಗೆ ಯಾವರೀತಿ ತೊಂದರೆಯಾಗಿದೆ ಅದನ್ನು ಪರಿಹಾರ ಮಾಡಬೇಕು. ಈ ರೀತಿ ಮುಂದೆ ಆಗದಹಾಗೆ ನೋಡಿಕೊಳ್ಳಬೇಕು. ಮಾನ್ಯ ಸದಸ್ಯರನ್ನು ತಮ್ಮ ಸ್ಥಾನಕ್ಕೆ ಬಂದು ವಿಚಾರಗಳನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ.

(ಮಾನ್ಯ ಸದಸ್ಯರು ತಮ್ಮ ಸ್ಥಾನಕ್ಕೆ ಪಾಪಸ್ ಬಂದು ಕುಳಿತರು)

ಅಧ್ಯಕ್ಷರು. ಪ್ರಶ್ನೋತ್ತರ ಮೇಲೆ ಅದಮೇಲೆ ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಎತ್ತಲಿ. ಅವರಿಗೆ ಪಕ್ಕಪಕ್ಕದಲ್ಲೇ ರೂಮುಗಳನ್ನು ಕೊಟ್ಟಿದೆ. ಇಬ್ಬರೂ ಇದೇ ರೂಮು ಬೇಕು ಎಂದು ಜಗಳ ತೆಗೆದಿದ್ದಾರೆ. ಇಲ್ಲಿ ಬಂದು ಏನೇನೋ ಹೇಳುತ್ತಾರೆ ಆದ್ದರಿಂದ ಪ್ರಶ್ನೋತ್ತರ ಮೇಲೆಯಾದ ಮೇಲೆ ಈ ಪ್ರಶ್ನೆಯನ್ನು ಎತ್ತಲಿ.

Distributing Question and Answers list under rules.

ಶ್ರೀ ಸಿ. ಎಂ. ಇಬ್ರಾಹಿಂ (ಶಿವಾಜಿನಗರ). —ಪ್ರತಿನಿತ್ಯ ನಾವು ಈ ಮನೆಗೆ ಬಂದ ಮೇಲೆ ಪ್ರಶ್ನೋತ್ತರಗಳನ್ನು ಟೇಬಲ್ ಮೇಲೆ ಇಟ್ಟರೆ ನಾವು ಉಪ-ಪ್ರಶ್ನೆಗಳನ್ನು ಹೇಗೆ ಕೇಳುವುದು? ನಮಗೆ ಒಂದಿನ ದಿವಸ ಸಾಯಂಕಾಲ ಪ್ರಶ್ನೋತ್ತರಗಳನ್ನು ಕೊಟ್ಟರೆ ನಾವು ಓದಿಕೊಂಡು ಉಪ-ಪ್ರಶ್ನೆಗಳನ್ನು ಕೇಳುವುದಕ್ಕೆ ಅನುಕೂಲವಾಗುತ್ತದೆ.

ಅಧ್ಯಕ್ಷರು. —ಮಾನ್ಯ ಸದಸ್ಯರು ಸ್ವಲ್ಪ ರೂಲ್ಸನ್ನು ತಿಳಿದುಕೊಳ್ಳಬೇಕು. ರೂಲ್ಸ್‌ನಲ್ಲಿ ಏನಿದೆಯೆಂದರೆ ಸಭೆ ಸೇರುವುದಕ್ಕೆ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳನ್ನು ಕೊಡಬೇಕು ಎಂದು ಇದೆ. ಪ್ರಿಂಟಾಗಿ ಪ್ರಶ್ನೋತ್ತರಗಳು ಹೊರಗಡೆ ಹೋಗಬಾರದು ಏನ್ನುವ ದೃಷ್ಟಿಯಿಂದ ನಿಯಮಾವಳಿಯನ್ನು ಮಾಡಲಾಗಿದೆ. ಸಭೆ ಸೇರುವುದಕ್ಕೆ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳನ್ನು ಸದಸ್ಯರಿಗೆ ಕೊಡಬೇಕು ಏನ್ನುವುದನ್ನು ಒಪ್ಪುತ್ತೇನೆ.

† Indicates that remarks or speeches have not been revised by the member concerned.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಭೆ ಸೇರುವುದಕ್ಕೆ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳನ್ನು ಕೊಡಬೇಕು ಎಂದು ತಾವು ನಿನ್ನೆ ಆಪ್ಪಣೆ ಕೊಡಿಸಿದ್ದೀರಿ; ಆ ರೀತಿ ವ್ಯವಸ್ಥೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ವಿಧಾನ ಪರಿಷತ್ತಿನಲ್ಲಿ ಹಿಂದಿನದಿವಸವೇ ಕೊಡುತ್ತಾರೆ.

ಅಧ್ಯಕ್ಷರು.—ಅಲ್ಲಿ ರೂಲ್ಸ್ ಏನಿದೆಯೋ ಏನೋ ನನಗೆ ಗೊತ್ತಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮೊದಲೇ ಸಾರ್ವಜನಿಕರಿಗೆ ಗೊತ್ತಾಗಬಾರದು ಎನ್ನುವ ಆರ್ಥದಲ್ಲಿ ತಾವು ಹೇಳಿದಿರಿ. ವಿಧಾನಪರಿಷತ್ತಿನಲ್ಲಿ ಹಿಂದಿನದಿವಸವೇ ಕೊಡುತ್ತಾರೆ.

MR. SPEAKER.—Unless the rule is amended I have to honour the existing rule and cannot change it.

ಶ್ರೀ ಸಿ. ಎಂ. ಇಬ್ರಾಹಿಂ.—ನಾನು ರೂಲ್ಸ್ ಪ್ರಕಾರವೇ ಕೇಳುತ್ತಿದ್ದೇನೆ. ಸಭೆ ಸೇರುವುದಕ್ಕೆ ೨ ಗಂಟೆ ಮುಂಚಿತವಾಗಿ ಪ್ರಶ್ನೋತ್ತರಗಳನ್ನು ಕೊಡಬೇಕು.

MR. SPEAKER.—That will be done.

A member occupying the C.M.S Seat (Contd)

(ಮಾನ್ಯ ಭೀಮಣ್ಣ ಖಂಡ್ರೆಯವರು ಮಾತನಾಡುವುದಕ್ಕೆ ಪ್ರಾರಂಭಮಾಡಿದರು) * * *

ಅಧ್ಯಕ್ಷರು.—ಅವರು ಹೇಳುವುದು ಏನನ್ನೂ ರಿಕಾರ್ಡ್ ಮಾಡಬೇಡಿ. I want the hon. member to respect the rules and conventions. ಪ್ರಶ್ನೋತ್ತರಗಳಾದ ಮೇಲೆ ಈ ಪ್ರಶ್ನೆಯನ್ನು ತಾವು ಕೇಳಬಹುದು. ಮತ್ತು ಇದನ್ನು ಹೇಳುವುದಕ್ಕೆ ನೋಟೀಸ್ ಕೊಡಬೇಕು ಇದು ಬಹಳ ಚಿಕ್ಕವಿಷಯ.

ಶ್ರೀ ಭೀಮಣ್ಣ ಖಂಡ್ರೆ.—ಅಧ್ಯಕ್ಷರೆ ನನಗೆ ಇಳಿದುಕೊಳ್ಳಲು ಕೊಟ್ಟಿರುವ ಮನೆ ಸರಿಯಿಲ್ಲ.

MR. SPEAKER.—If you misbehave further, you will be in trouble. This is question hour. After question hour you can raise this matter.

ಶ್ರೀ ಎಚ್. ಡಿ. ದೇವೇಗೌಡ.—ಸಭೆಯಲ್ಲಿ ಸದಸ್ಯರು ಮಿಸ್‌ಬಿಹೇವ್ ಮಾಡಬಾರದು ಎನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಹಾಗೆಯೇ ಸದಸ್ಯರನ್ನು ನೋಡಿಕೊಳ್ಳುವುದು ಮತ್ತು ಸದಸ್ಯರನ್ನು ಟ್ರೀಟ್ ಮಾಡತಕ್ಕಂಥಾದ್ದರ ಬಗ್ಗೆ ಆವರಿಗೂ ಆಷ್ಟೆ ತೀವ್ರತೆ ಇರಬೇಕು. They should not be treated as slaves. When a Member comes to the city to attend the session, he must be provided with the accommodation. But the Member has not been provided with the accommodation. So, it is the fault of your Secretary. You must take care of your Secretariat whatever it might be your contention and the member cannot be thrown out in the street.

MR. SPEAKER.—Both are accommodated side by side. ಇಬ್ಬರಿಗೂ ರೂಮುಗಳನ್ನು ಪಕ್ಕಪಕ್ಕದಲ್ಲೇ ಕೊಟ್ಟಿದ್ದೇವೆ. ಒಂದೇ ರೂಮನ್ನು ಇಬ್ಬರೂ ಬೇಕು ಎಂದು ಕೇಳುತ್ತಾರೆ, ಏನು ಮಾಡೋಣ?

---

* * * matter not recorded as ordered by the Chair.